ದಿನಾಂಕಃ 12-02-2021 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಪಾಟಿ ಸವಾಲುಃ–** ಪ್ರತಿವಾದಿ 1 ರ ಪರ ಶ್ರೀ ಪಿಎಸವ್ಶೈ ವಕೀಲರಿಂದ

ನಾನು 8 ನೇ ತರಗತಿವರೆಗೆ ವಿದ್ಯಾಬ್ಯಾಸ ಮಾಡಿರುವೆನು. ಪ್ರತಿವಾದಿ 2 ಮತ್ತು 3 ರವರನ್ನು ಯಾವ ಕಾರಣಕ್ಕಾಗಿ ಈ ದಾವೆಯಲ್ಲಿ ಪಕ್ಷಗಾರನ್ನಾಗಿ ಮಾಡಿರುವೆನು ಎಂಬುದರ ಬಗ್ಗೆ ನನಗೆ ಹೇಳಲು ಆಗುವುದಿಲ್ಲ. ಪ್ರತಿವಾದಿ 1 ಇಚ್ಚಂಗಿ ಗ್ರಾಮದವರು. ಪ್ರತಿವಾದಿ 1 ವಿನ ಬಗ್ಗೆ ನನಗೆ ಪರಿಚಯ ಇರುವುದು. ಪ್ರತಿವಾದಿ 1 ವಿನ ಕುಟುಂಬದ ಬಗ್ಗೆ ನನಗೆ ಪರಿಚಯ ಇರುವುದಿಲ್ಲ. ಪ್ರತಿವಾದಿ 1 ವಿಗೆ ಅವರ ಕುಟುಂಬದಿಂದ ಯಾವ ಯಾವ ಆಸ್ತಿಗಳು ಬಂದಿರುವವು ಎಂಬ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಪ್ರತಿವಾದಿ 1 ವಿನ ಪರಿಚಯ ಸುಮಾರು 15 ವರುಷಗಳಿಂದ ಪರಿಚಯ ಇರುವನು. ಇವರು ನಮ್ಮ ಗ್ರಾಮಕ್ಕೆ ಹೋಗಿ ಬಂದು ಮಾಡುವುದರಿಂದ ಇವರು ನನಗೆ ಪರಿಚಯ ಆಗಿರುವರು. ಪ್ರತಿವಾದಿ 1 ವಿನ ಸಂಬಂಧಿಗಳು ನಮ್ಮ ಗ್ರಾಮದಲ್ಲಿ ವಾಸವಾಗಿರುವುದರಿಂದ ಆಗ ನನಗೆ ಇವರ ಪರಿಚಯ ಆಗಿರುವದು. ಪ್ರತಿವಾದಿ 1 ವಿನ ಸಂಬಂಧಿಗಳ ಹೆಸರು ನಾಗಪ್ಪ ತಳವಾರ ಅಂತಾ ಇರುವುದು.

ನಾನು ರಾಜಕೀಯ ಯಾವುದೇ ಪಕ್ಷದ ಸದಸ್ಯನಾಗಿರುವುದಿಲ್ಲ. ನಾನು 2010 ರ ಪೂರ್ವದಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಧುರೀಣನಾಗಿದ್ದೆನು ಅಂದರೆ ಸರಿಯಲ್ಲ. 2010 ರ ನಂತರ ನಾನು ಭಾರತೀಯ ಜನತಾ ಪಕ್ಷದ ಧುರೀಣನಾಗಿರುವೆನು ಅಂದರೆ ಸರಿಯಲ್ಲ. ನನ್ನ ಸ್ವಂತಕ್ಕೆ 22 ಎಕರೆಯ ಜಮೀನು

ಇರುವುದು. ವಾರ್ಷಿಕ ವರಮಾನ 3 ಲಕ್ಷ ರೂ.ಗಳಷ್ಟು ಬರುವುದು. ಇದಕ್ಕೆ ಸಂಬಂಧಪಟ್ಟಂತೆ ಯಾವುದೇ ದಾಖಲಾತಿ ಹಾಜರುಪಡಿಸಿರುವುದಿಲ್ಲ. ದಾವಾ ಆಸ್ತಿ 1 ನೇ ಪ್ರತಿವಾದಿಗೆ ಹೇಗೆ ಬಂದಿರುವುದು ಎಂದು ನನಗೆ ಹೇಳಲು ಬರುವುದಿಲ್ಲ. ದಾವಾ ಆಸ್ತಿಯ ಚಕ್ಕಂಬಂದಿ ನನಗೆ ಹೇಳಲು ಬರುವುದು. ದಾವಾ ಆಸ್ತಿಯ ದಕ್ಷಿಣಕ್ಕೆ ದೇವಪ್ಪ ಕೋಡ್ಪಿನವರ ಆಸ್ತಿ ಇರುವುದು. ದಾವಾ ಅಸ್ತಿಯ ದಕ್ಷಿಣ ದಿಕ್ಕಿಗೆ ಶಿವಾನಂದ ಬಾಳಣ್ಣನವರ ಜಮೀನು ಇರುವುದು ಅಂದರೆ ಸರಿಯಲ್ಲ.

ಈ ದಾವೆ ದಾಖಲು ಮಾಡುವ ಪೂರ್ವದಲ್ಲಿ 1 ನೇ ಪ್ರತಿವಾದಿಗೆ ನೋಟಿಸು ನೀಡಿದ್ದೆನು ಅಂದರೆ ಸರಿ. ಅದರ ದಿನಾಂಕ ನನಗೆ ನೆನಪಿರುವುದಿಲ್ಲ. ದಾವಾ ಆಸ್ತಿಯು ಈ ಮೊದಲು ಯಾರ ಹೆಸರಿನಲ್ಲಿ ಇತ್ತು ಎಂದು ನನಗೆ ಹೇಳಲು ಬರುವುದಿಲ್ಲ. ಪ್ರತಿವಾದಿ 1 ವಿಗೆ ಬ್ಯಾಂಕ ಸಾಲ ಇದ್ದ ಬಗ್ಗೆ ನಾನು ಯಾವುದೇ ದಾಖಲಾತಿ ಹಾಜರುಪಡಿಸಿರುವುದಿಲ್ಲ.

ಮುಂದಿನ ಪಾಟಿ ಸವಾಲಿಗೆ ಪ್ರಕರಣವನ್ನು ಮುಂದೂಡಲಾಯಿತು.

(ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೆ.ಕೆ.ಸರಿ.ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಮ್ ಎಫ್ ಸಿ, ಶಿಗ್ಗಾಂವ.
(ಸ್ಥಳಃ ಸವಣೂರ)

ಅಸಲು ದಾವಾ ನಂ. 115/2017
ಪಿ ಡಬ್ಲು 1